ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 4 ]
Total No. of Printed Pages : 4 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 8 + 6 ]
Total No. of Questions : 8 + 6 ]

**A**

**CCE RR**

Question Paper Serial No. **600**

**ಸಂಕೇತ ಸಂಖ್ಯೆ : 98-K**

**Code No. : 98-K**

# ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಪ್ರಾಯೋಗಿಕ ವಿಭಾಗ

## Subject : CARNATIC MUSIC / HINDUSTANI MUSIC — PRACTICAL

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)**

ದಿನಾಂಕ : 27. 06. 2022 ] [ Date : 27. 06. 2022

ಸಮಯ : 1 ಗಂಟೆ 30 ನಿಮಿಷಗಳು ] [ Time : 1 hour 30 minutes

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 8 + 6 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

# (ಕರ್ನಾಟಕ ಸಂಗೀತ)

ಪರೀಕ್ಷಕರು ಈ ಕೆಳಗಿನ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೇಳುವುದು :

1. ಮೂರನೆಯ ಸರಳೆ ವರಸೆಯನ್ನು ಮೂರೂ ಕಾಲಗಳಲ್ಲಿ ಹಾಡಿ. 4

2. 'ಪದುಮನಾಭ' ಗೀತೆಯ ತಾಳ ಹಾಗೂ 'ಶ್ರೀ ಗಣನಾಥ' ಗೀತೆಯ ತಾಳಕ್ಕಿರುವ ಒಂದು ವ್ಯತ್ಯಾಸವನ್ನು ತಿಳಿಸಿ. 'ಶ್ರೀ ಗಣನಾಥ' ಪಿಳ್ಳಾರಿ ಗೀತೆಯನ್ನು ಹಾಡಿ. 4

3. ಯಾವುದಾದರೊಂದು ಜತಿಸ್ವರದ ಪಲ್ಲವಿ, ಅನುಪಲ್ಲವಿ ಹಾಗೂ ಎರಡು ಚರಣಗಳನ್ನು ಹಾಡಿ. 4

4. ತಾನವರ್ಣಗಳಿಗೂ, ಜತಿಸ್ವರಗಳಿಗೂ ಇರುವ ಒಂದು ವ್ಯತ್ಯಾಸವನ್ನು ತಿಳಿಸಿ. ಯಾವುದಾದರೊಂದು ತಾನವರ್ಣದ ಪೂರ್ವಾರ್ಧವನ್ನು ಹಾಡಿ. 8

5. ಮಧ್ಯಮ ಕಾಲದ ಕೃತಿಗಳು ವಿಳಂಬಕಾಲದ ಕೃತಿಗಳಿಗಿಂತ ಭಿನ್ನ. ಹೇಗೆ ? ಯಾವುದಾದರೊಂದು ಮಧ್ಯಮಕಾಲದ ಕೃತಿಯ ಪಲ್ಲವಿ, ಅನುಪಲ್ಲವಿಗಳನ್ನು ಹಾಡಿ. 6

6. ವಿಳಂಬಕಾಲದ ಕೃತಿಗಳಿಗೂ, ಮಧ್ಯಮಕಾಲದ ಕೃತಿಗಳಿಗೂ ಇರುವ ಒಂದು ಸಾಮ್ಯತೆಯನ್ನು ತಿಳಿಸಿ. ಯಾವುದಾದರೊಂದು ವಿಳಂಬಕಾಲದ ಕೃತಿಯನ್ನು ಚರಣಭಾಗದಿಂದ ಹಾಡಿ. 6

7. ಹರಿದಾಸರ ಕೀರ್ತನೆಗಳಿಗೂ, ಶಿವಶರಣರ ವಚನಗಳಿಗೂ ಇರುವ ಯಾವುದಾದರೊಂದು ವ್ಯತ್ಯಾಸವನ್ನು ತಿಳಿಸಿ. ಪುರಂದರದಾಸರ ಯಾವುದಾದರೊಂದು ಕೀರ್ತನೆಯನ್ನು ಹಾಡಿ. 4

8. ಬಸವಣ್ಣನವರ ಒಂದು ವಚನವನ್ನು ಹಾಡಿ. (ಹಾಡುವಾಗ ವಿದ್ಯಾರ್ಥಿಯ ಸ್ವಂತ ಶೈಲಿಯನ್ನು ಗಮನಿಸುವುದು). 4

# (ಹಿಂದೂಸ್ಥಾನಿ ಸಂಗೀತ)

ಪರೀಕ್ಷಕರು ಈ ಕೆಳಗಿನ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೇಳುವುದು :

1. ಸಂಗೀತದ ಕಲಿಕಾರ್ಥಿಗಳು ಪ್ರಾರಂಭಿಕ ಸ್ವರಾಭ್ಯಾಸಗಳನ್ನು ಅಭ್ಯಾಸ ಮಾಡಬೇಕು. ಏಕೆ ? ನಿಮ್ಮ ಪಠ್ಯಕ್ರಮದಲ್ಲಿರುವ ಯಾವುದಾದರೂ ಒಂದು ಸರಳೆ ಸ್ವರವನ್ನು ಠಾಯ್, ದುಗುನ್ ಹಾಗೂ ಚೌಗುನ್ ಲಯದಲ್ಲಿ ಹಾಡಬೇಕು. 6

2. ಸ್ವರಗೀತೆಯನ್ನು ವ್ಯಾಖ್ಯಾನಿಸಿ. ದೇಸ್ ರಾಗದ ಸ್ವರಗೀತೆಯನ್ನು ಠಾಯ್, ದುಗುನ್ ಹಾಗೂ ಚೌಗುನ್‌ನಲ್ಲಿ ಹಾಡುವುದು. 8

3. ಲಕ್ಷಣಗೀತೆಗೂ ಮತ್ತು ಸ್ವರಗೀತೆಗೂ ಇರುವ ವ್ಯತ್ಯಾಸವೇನು ? ನಿಮ್ಮ ಪಠ್ಯಕ್ರಮದಲ್ಲಿರುವ ಯಾವುದಾದರೊಂದು ರಾಗದ ಲಕ್ಷಣಗೀತೆಯನ್ನು ಹಾಡುವುದು. 6

4. ಛೋಟಾಖ್ಯಾಲ್ ಗಾಯನವು ಧ್ರುಪದ್ ಗಾಯನಕ್ಕಿಂತ ಭಿನ್ನ. ಹೇಗೆ ? ಪಠ್ಯಕ್ರಮದಲ್ಲಿರುವ ಯಾವುದಾದರೂ ಒಂದು ರಾಗದ ಛೋಟಾಖ್ಯಾಲನ್ನು ಹಾಡುವುದು. 10

5. ವಚನಗಳು, ದಾಸರ ಪದಗಳಿಗಿಂತ ಭಿನ್ನ. ಹೇಗೆ ? ಅಕ್ಕಮಹಾದೇವಿ ಅಥವಾ ಬಸವಣ್ಣನವರ ಒಂದು ವಚನವನ್ನು ಹಾಡುವುದು. 6

6. ಝುಪ್ತಾಲ್ ಮಾಹಿತಿಯನ್ನು ವಿವರಿಸಿ ಹಾಗೂ ಬೋಲನ್ನು ಹೇಳುತ್ತಾ ತಾಳವನ್ನು ಕೈಯಲ್ಲಿ ಹಾಕಿ ತೋರಿಸಿ. 4